ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

**ವಿಷಯ:-** ಸುಜಲ-III ಯೋಜನೆಯ ನಿರ್ಗಮನ (Exit Strategy) ಕಾರ್ಯಕ್ರಮದಡಿ ಭೂಸಂಪನ್ಮೂಲ (LRI) ಮಾಹಿತಿ ಪ್ರಸರಣೆ ಚಟುವಟಿಕೆಗಳ ವೆಚ್ಚ ಭರಿಸಲು ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರಿಗೆ, ರೂ.12.116 ಲಕ್ಷ ಅನುದಾನ ವರ್ಗಾಯಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: AGRI-AML/103/2019, ಬೆಂಗಳೂರು, ದಿನಾಂಕ:31.12.2019
2. ಈ ಕಛೇರಿ ಸುತ್ತೋಲೆ ಸಂ.ಜ.ಅ.ಇ./ಕಾನಿ/ಕಜಯೋ-II(ಸುಜಲ-III) /ಸಂ.ಜ.ಉ./2017-18 ದಿ:31.12.2019
3. ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರ ಪತ್ರಗಳ (1)ಸಂ: ಜಕೃನಿ.ಕೋ/ತಾಂ-3/WDDP/LRI ಬಾ.ಮೊ.ಬಿ/2020-21 ದಿನಾಂಕ 03.08.2020 (ಇ-ಮೇಲ್ ದಿನಾಂಕ: 05.08.2020) ಹಾಗೂ (2) ಜಕೃನಿ.ಕೋ/ತಾಂ/ಸುಜಲ-III/2020-21 ದಿನಾಂಕ 21.09.2019 (ಇ-ಮೇಲ್ ದಿನಾಂಕ: 24.09.2020)

**ಪೀಠಿಕೆ:-**

ಸುಜಲ-III ಯೋಜನೆಯು ದಿನಾಂಕ 31.12.2019 ರಂದು ಮುಕ್ತಾಯಗೊಂಡ ಕಾರಣ ಸುಜಲ-III ಯೋಜನಾ ನಂತರದ ಅವಧಿಯಲ್ಲಿ ಜನವರಿ 2020 ರಿಂದ ಡಿಸೆಂಬರ್ 2024 ರವರೆಗೆ ಸುಜಲ-III ನಿರ್ಗಮನ (Exit Strategy) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2019 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ, ರವರ ಅಧ್ಯಕ್ಷತೆಯಲ್ಲಿ ನಡೆದ 14ನೇ Project Empowered Committee (PEC) ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಸುಜಲ-III ನಿರ್ಗಮನ ಕಾರ್ಯಕ್ರಮವನ್ನು ಕಾರ್ಯಕ್ರಮ ಅನುಷ್ಠಾನ ಮಾಡಲು ಅನುಮೋದನೆ ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಆದಕಾರಣ, ಸದರಿ ಕಾರ್ಯಕ್ರಮದಡಿ ಸಂಬಂಧಿತ ರೈತ ಸಂಪರ್ಕ ಕೇಂದ್ರಗಳ ಮೂಲಕ ಒಂದು ದಿನದ ಗ್ರಾಮ ಮಟ್ಟದ ತರಬೇತಿಗಳನ್ನು ಆಯೋಜಿಸಲು ಹಾಗೂ LRI ಎಕ್ಸ್ಟೆನ್ಷನ್ ಮ್ಯಾನೇಜರ್ ಸಿಬ್ಬಂದಿಗಳನ್ನು ಮುಂದುವರಿಸಲು ಯೋಜನಾ ಜಿಲ್ಲೆಗಳಿಗೆ ಸೂಚಿಸಲಾಗಿರುತ್ತದೆ. ಆದ್ದರಿಂದ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರು ಜನವರಿ 2020 ರಿಂದ ಮಾರ್ಚ್ 2020 ವರೆಗೆ ಕೈಗೊಂಡಿರುವ ಭೂಸಂಪನ್ಮೂಲ ತರಬೇತಿ ವೆಚ್ಚ, LRI ಕಾರ್ಡ್ ಮುದ್ರಣ ವೆಚ್ಚ ಮತ್ತು LRI ಎಕ್ಸ್ಟೆನ್ಷನ್ ಮ್ಯಾನೇಜರ್ ಸಿಬ್ಬಂದಿಗಳ ವೇತನ ಪಾವತಿಸಲು ಒಟ್ಟು ರೂ.12.116 ಲಕ್ಷ (ರೂ ಹನ್ನೆರೆಡು ಲಕ್ಷದ ಹನ್ನೊಂದು ಸಾವಿರದ ಆರುನೂರು ಮಾತ್ರ) ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ (ಉಲ್ಲೇಖ-3).

ಈ ಹಿನ್ನೆಲೆಯಲ್ಲಿ, ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಖಾತೆಗೆ ಜಮೆ ಮಾಡಿರುವ ಸುಜಲ-III ಯೋಜನೆಯಡಿಯ ವೆಚ್ಚವಾಗದೆ ಉಳಿಕೆಯಾದ ಅನುದಾನ ಮೊತ್ತದಲ್ಲಿ ಉಲ್ಲೇಖ(3) ರಲ್ಲಿ ಕೋರಿರುವ ರೂ.12.116 ಲಕ್ಷ (ರೂ ಹನ್ನೆರೆಡು ಲಕ್ಷದ ಹನ್ನೊಂದು ಸಾವಿರದ ಆರುನೂರು ಮಾತ್ರ) ಅನುದಾನವನ್ನು ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರಿಗೆ ವರ್ಗಾಯಿಸಲು ಅನುಮೋದಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಕಛೇರಿ ಆದೇಶ ಸಂಖ್ಯೆ:ಸುಜಲ-III/ನಿರ್ಗಮನ ಕಾ. (Ext. Str.).:ಕೊ.:ಅನುದಾನ.ಬಿ.:2020-21,ದಿನಾಂಕ:28.09.2020**

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರಿಗೆ ಸುಜಲ-III ನಿರ್ಗಮನ ಕಾರ್ಯಕ್ರಮದಡಿ ಜನವರಿ 2020 ರಿಂದ ಮಾರ್ಚ್ 2020 ವರೆಗೆ ಕೈಗೊಂಡಿರುವ ಭೂ ಸಂಪನ್ಮೂಲ ತರಬೇತಿ, LRI ಕಾರ್ಡ್ ಮುದ್ರಣ ಮತ್ತು LRI ಎಕ್ಸ್ಟೆನ್ಷನ್ ಮ್ಯಾನೇಜರ್ ಸಿಬ್ಬಂದಿಗಳ ವೇತನ ಪಾವತಿ ವೆಚ್ಚ ಭರಿಸಲು, ರೂ.12.116 ಲಕ್ಷ (ರೂ ಹನ್ನೆರೆಡು ಲಕ್ಷದ ಹನ್ನೊಂದು ಸಾವಿರದ ಆರುನೂರು ಮಾತ್ರ) ಅನುದಾನವನ್ನು ಈ ಕಛೇರಿಯ Account of Chief Executive Officer SLNA, Watershed Development Department -Account No.:04462010093831, Syndicate Bank, BWSSB ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು) ಖಾತೆಗೆ ಜಮೆ ಮಾಡಿರುವ ಸುಜಲ-III ಯೋಜನೆಯಡಿಯ ಉಳಿಕೆ ಅನುದಾನ ಮೊತ್ತದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವರ್ಗಾಯಿಸಲು ಆದೇಶಿಸಿದೆ.

ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಜಿಲ್ಲೆ, ಇವರು ಬಿಡುಗಡೆಗೊಳಿಸಿರುವ ಅನುದಾನವನ್ನು ಉಲ್ಲೇಖ(3) ರ ಪತ್ರದಲ್ಲಿ ತಿಳಿಸಿರುವ ಚಟುವಟಿಕೆಗಳ ವೆಚ್ಚದ ಪಾವತಿಗೆ ಮಾತ್ರ ಇಲಾಖಾ ಮಾರ್ಗಸೂಚಿ ಹಾಗೂ ಆರ್ಥಿಕ ನಿಯಮಗಳ ಅನ್ವಯ ಭರಿಸತಕ್ಕದ್ದು ಮತ್ತು ವೆಚ್ಚದ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು. ಮಾಡಿರುವ ವೆಚ್ಚಕ್ಕೆ ಅನುಗುಣವಾಗಿ ಲೆಕ್ಕಪತ್ರವನ್ನು ನಿರ್ವಹಿಸಿ ತಪಾಸಣೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

28/9/2020

ಆಯುಕ್ತರು (I/C)
ಜಲಾನಯನ ಅಭಿವೃದ್ಧಿ ಇಲಾಖೆ
ಬೆಂಗಳೂರು

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ಮುಖ್ಯಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಕೊಪ್ಪಳ ಜಿಲ್ಲೆ ಇವರಿಗೆ
4. ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಇವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ / ಆದೇಶದ ಕಡತಕ್ಕೆ.